KASM620026012024

Presented on : 23-10-2024
Registered on : 19-12-2024
Decided on : 11-08-2026
Duration : 1 years, 9 months, 19 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.**

: **ಉಪಸ್ಥಿತರು** :

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 11 ನೇ ಆಗಸ್ಟ್ 2026

**ಸಿ.ಸಿ.ಸಂಖ್ಯೆಃ 1709/2024**

| | |
|---|---|
| ಫಿರ್ಯಾದುದಾರರು | ರಾಜ್ಯ ಸರ್ಕಾರದ ಪರವಾಗಿ, ಸಾಗರ ಟೌನ್ ಪೋಲಿಸ್ ಠಾಣೆ. |
| | *(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)* |

**– ವಿರುದ್ಧ –**

| | |
|---|---|
| ಆರೋಪಿತರು | 1. ಕುಮಾರ ಎಸ್ ಎಂ<br>ಬಿನ್ ಮಲ್ಲಣ್ಣ<br>ವಯಸ್ಸು ಸುಮಾರು 78 ವರ್ಷ, |

| | |
|---|---|
| | 2. ಮಾಲತೇಶ ಬಿನ್ ಕುಮಾರ ಎಸ್ ಎಂ<br>ವಯಸ್ಸು ಸುಮಾರು 45 ವರ್ಷ.<br><br>ಇಬ್ಬರ ವಾಸಃ ಕೆನರಾ ಬ್ಯಾಂಕ್ ಎದುರುಗಡೆ ಚೌಸಮ್ಮ ಬೀದಿ ಸಾಗರ ನಗರ, ಶಿವಮೊಗ್ಗ. ಶಿವಮೊಗ್ಗ. |
| | ***(ಪ್ರತಿನಿಧಿಸಿದವರು ಶ್ರೀ ಟಿ ಬಿ ಎಂ., ವಕೀಲರು)*** |

| | |
|---|---|
| ಅಪರಾಧ ನಡೆದ ದಿನಾಂಕ | 31.12.2023 |
| ಅಪರಾಧ ವರಧಿಯಾದ ದಿನಾಂಕ | 31.12.2023 |
| ಪಿರ್ಯಾದುದಾರರ ಹೆಸರು | ವಿಜಯಕುಮಾರ ಪಾಟೀಲ್ |
| ಸಾಕ್ಷಿ ವಿಚಾರಣೆ ಪ್ರಾರಂಭ ದಿನಾಂಕ | 18.08.2025 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 03.06.2026 |
| ಆರೋಪಿತರ ಮೇಲೆ ಹೊರಿಸಿದ ಆರೋಪಗಳು | ಭಾರತದ ದಂಡ ಸಂಹಿತೆ ಕಲಂ 447, 504, 323, 506 ಸಹವಾಚಕ ಕಲಂ 34. |
| ನ್ಯಾಯಾಲಯದ ಆದೇಶ | ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಮಾಡಲಾಗಿದೆ. |

## <u>ತೀರ್ಪು</u>

ಸಾಗರ ಟೌನ್ ಪೊಲೀಸ್ ಠಾಣಾ ಸಹಾಯಕ ಆರಕ್ಷಕ ಉಪನಿರೀಕ್ಷಕರು, ಆರೋಪಿತರ ವಿರುದ್ಧ ಭಾರತದ ದಂಡ ಸಂಹಿತೆಯ ಕಲಂ 447, 504, 323, 506 ಸಹವಾಚಕ ಕಲಂ 34 ರ ಆರೋಪಗಳಿಗಾಗಿ ಠಾಣಾ ಗುನ್ನೆ ಸಂಖ್ಯೆ 2/2024 ರಂತೆ ಪ್ರಕರಣವನ್ನು ನೊಂದಾಯಿಸಿಕೊಂಡು, ತನಿಖೆ ಮಾಡಿ ಮೇಲಿನ ಅಪರಾಧಗಳ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿರುತ್ತದೆಃ</u>**

ದಿನಾಂಕಃ 31.12.2023 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಸಾಗರ ಪೇಟೆ ಪೋಲೀಸ್ ಠಾಣಾ ಸರಹದ್ದಿನ ಚಾಸಾ.1 ರವರಿಗೆ ಸೇರಿದ ಸಾಗರ ಟೌನ್ ಕೊತ್ವಾಲಕಟ್ಟೆ ಸರ್ವೇ ನಂ.5/4 ರಲ್ಲಿ ಕಂಡ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ, ಚಾಸಾ.1 ರವರನ್ನು ಅಡ್ಡಗಟ್ಟಿ ಅವಾಚ್ಯವಾಗಿ ಬೈಯ್ದು, ಕೊರಳ ಪಟ್ಟಿ ಹಿಡಿದು ಎಳದಾಡಿ ಕೈಗಳಿಂದ ಹಲ್ಲೆ ಮಾಡಿ, ಸಾಮಾನ್ಯ ಸ್ವರೂಪದ ಗಾಯಪಡಿಸಿ, ಚಾಸಾ.1 ರವರಿಗೆ ಈ ದಿನ ನಿನ್ನನ್ನು ಇಲ್ಲೆ ಕೊಲೆ ಮಾಡಿಯೇ ತೀರುತ್ತೇವೆ ಎಂದು, ಜೀವ ಬೆದರಿಕೆ ಹಾಕಿರುವುದು ತಮ್ಮ ತನಿಖೆಯಲ್ಲಿ ಕಂಡು ಬಂದಿರುತ್ತದೆ. ಆದ್ದರಿಂದ, ಅವರ ವಿರುದ್ಧ ಭಾರತೀಯ

ದಂಡ ಸಂಹಿತೆಯ ಕಲಂ 447, 504, 323, 506 ಸಹವಾಚಕ ಕಲಂ 34 ರ ಅಡಿಯಲ್ಲಿನ ಆರೋಪಗಳಿಗಾಗಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಈ ನ್ಯಾಯಾಲಯವು ಘಟನೆ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡ ನಂತರ ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನನ್ನು ಪಡೆದುಕೊಂಡಿರುತ್ತಾರೆ. ನಂತರ, ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಈ ಹಂತದಲ್ಲಿ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಸಾಧನಗಳು ಲಭ್ಯವಿದ್ದ ಕಾರಣ, ಭಾರತದ ದಂಡ ಸಂಹಿತೆ ಕಲಂ 447, 504, 323, 506 ಸಹವಾಚಕ ಕಲಂ 34 ರ ಆರೋಪಗಳಿಗೆ ಅವರ ವಿರುದ್ಧದ ಆರೋಪ/ದೋಷಾರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿತರು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

4. ತಮ್ಮ ಪ್ರಕರಣವನ್ನು ಬೆಂಬಲಿಸಿ, ಅಭಿಯೋಜನೆಯು 8 ಸಾಕ್ಷಿದಾರರ ಪೈಕಿ 5 ಜನ ಸಾಕ್ಷಿದಾರರನ್ನು ಫ್ರಾಸಾ 1 ರಿಂದ 5 ಎಂದು ವಿಚಾರಣೆ ಮಾಡಿಕೊಂಡು, ನಿಪಿ-1 ರಿಂದ ನಿಪಿ-11 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

5. ಅಭಿಯೋಜನೆಯ ಸಾಕ್ಷಿ ಮುಗಿದ ನಂತರ, ಆರೋಪಿತರ ವಿರುದ್ಧ ಅಪರಾಧ ಸೂಚಿಸುವ ಹೇಳಿಕೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಆರೋಪಿತರು ತಮ್ಮ ವಿರುದ್ಧ ಸೂಚಿಸಿದ ಎಲ್ಲಾ ಹೇಳಿಕೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆರೋಪಿತರು ಅಭಿಯೋಜನೆಯ ಪರ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಾಟೀ ಸವಾಲಿನಲ್ಲಿ ನಿ.ಡಿ.1 ರಿಂದ 11 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

6. ವಾದವನ್ನು ಆಲಿಸಿ ಕಡತವನ್ನು ಪರಿಶೀಲಿಸಿ ನೋಡಲಾಗಿ, ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತದೆ.

## **ಅಂಶಗಳು**

1. ದಿನಾಂಕಃ 31.12.2023 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಸಾಗರ ಪೇಟೆ ಪೋಲೀಸ್ ಠಾಣಾ ಸರಹದ್ದಿನ ಚಾಸಾ.1 ರವರಿಗೆ ಸೇರಿದ ಸಾಗರ ಟೌನ್ ಕೊತ್ವಾಲಕಟ್ಟೆ

ಸರ್ವೇ ನಂ.5/4 ರಲ್ಲಿ ಕಂಡ ಜಾಗಕ್ಕೆ 1 ಮತ್ತು 2 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾ.ದಂ.ಸಂ. ಕಲಂ.447 ಸಹವಾಚಕ ಕಲಂ 34 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ, ಚಾ.ಸಾ.1 ರವರಿಗೆ ಆರೋಪಿತರು ಅವಾಚ್ಯವಾಗಿ ಬೈದು, ಆ ಮೂಲಕ ಭಾ.ದಂ.ಸಂ. ಕಲಂ.504 ರ ಸಹವಾಚಕ ಕಲಂ 34 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು

ಮುಂದುವರೆಸುತ್ತಾ, ಚಾ.ಸಾ.1 ರವರಿಗೆ ಕೈಯಿಂದ ಹೊಡೆದು, ಹಿಡಿದು ಎಳೆದಾಡಿ ನೋವುಂಟು ಮಾಡಿ, ಆ ಮೂಲಕ ಭಾ.ದಂ.ಸಂ. ಕಲಂ.323 ರ ಸಹವಾಚಕ ಕಲಂ 34 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಸದರಿ ವಿಷಯವಾಗಿ ಸಮಾನ ಉದ್ದೇಶವನ್ನು ಮುಂದುವರೆಸುತ್ತಾ, ಆರೋಪಿತರು ಚಾ.ಸಾ.1 ರವರಿಗೆ ಜೀವ ಬೆದರಿಕೆ ಹಾಕಿ, ಆ ಮೂಲಕ ಭಾ.ದಂ.ಸಂ. ಕಲಂ.506 ರ ಸಹವಾಚಕ ಕಲಂ 34 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

5. ಹಾಗಿದ್ದರೆ ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

ಅಂಶ. 1 ರಿಂದ 4 : **ನಕಾರಾತ್ಮಕವಾಗಿ,**

ಅಂಶ.5 : ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ–

## ಕಾ ರ ಣ ಗ ಳು

8. **ಅಂಶ.1 ರಿಂದ 4**: ಪ್ರಕರಣದ ವಾಸ್ತಾವಾಂಶಗಳ ನಿರೂಪಣೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ, ಅಂಶ 1 ರಿಂದ 4 ನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಿದೆ.

ದಿನಾಂಕಃ 31.12.2023 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಸಾಗರ ಪೇಟೆ ಪೋಲೀಸ್ ಠಾಣಾ ಸರಹದ್ದಿನ ಚಾಸಾ.1 ರವರಿಗೆ ಸೇರಿದ ಸಾಗರ ಟೌನ್ ಕೊತ್ವಾಲಕಟ್ಟಿ ಸರ್ವೇ ನಂ.5/4 ರಲ್ಲಿ ಕಂಡ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ, ಚಾಸಾ.1 ರವರನ್ನು ಅಡ್ಡಗಟ್ಟಿ ಅವಾಚ್ಯವಾಗಿ ಬೈಯ್ದು, ಕೊರಳ ಪಟ್ಟಿ ಹಿಡಿದು ಎಳದಾಡಿ ಕೈಗಳಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಚಾಸಾ.1 ರವರಿಗೆ ಈ ದಿನ ನಿನ್ನನ್ನು ಇಲ್ಲೆ ಕೊಲೆ ಮಾಡಿಯೇ ತೀರುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆಂಬುದು ಅಭಿಯೋಜನೆಯ

ಪ್ರಕರಣವಾಗಿದೆ.

9. ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ 8 ಜನ ಸಾಕ್ಷಿದಾರರ ಪೈಕಿ, ಅಭಿಯೋಜನೆಯು 5 ಜನ ಸಾಕ್ಷಿದಾರರನ್ನು ಫ್ರಾ.ಸಾ.1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ ಒಟ್ಟು 11 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ.

10. ಫ್ರಾ.ಸಾ.1 ರವರು ದೂರುದಾರರಾಗಿದ್ದು, ಫ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ. ಫ್ರಾಸಾ.4 ರವರು ಸ್ಥಳ ಪಂಚನಾಮೆ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರಾಗಿದ್ದಾರೆ. ಫ್ರಾ.ಸಾ. 3 ಮತ್ತು 5 ರವರು ತನಿಖಾಧಿಕಾರಿಗಳಾಗಿದ್ದಾರೆ. ಅಭಿಯೋಜನೆಯು ಹಾಜರುಪಡಿಸಿರುವ ದಾಖಲೆಗಳನು ಪರಿಶೀಲಿಸಲಾಗಿ, ನಿ.ಪಿ.1 ದೂರು, ನಿ.ಪಿ.2 ಫೋಟೋ, ನಿ.ಪಿ.3 ಆರ್.ಟಿ.ಸಿ, ನಿ.ಪಿ.4 ಆಕಾರ್ ಬಂದ್ ಮತ್ತು ನಿ.ಪಿ.5 ಘಟನಾ ಸ್ಥಳದ ನಕ್ಷೆಯಾಗಿರುತ್ತದೆ. ನಿ.ಪಿ.6 ಮತ್ತು 7 ಸ್ಥಳ ಪಂಚನಾಮೆ ಆಗಿದ್ದು, ನಿ.ಪಿ.8 ಪಂಚರಿಗೆ ನೀಡಿದ ನೋಟೀಸು ಆಗಿದ್ದು, ನಿ.ಪಿ.9 ಪ್ರಥಮ ವರ್ತಮಾನ ವರದಿಯಾಗಿರುತ್ತದೆ. ನಿ.ಪಿ.10 ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವಾಗಿದ್ದು, ನಿ.ಪಿ.11 ಸಿ.ಡಿ. ಆಗಿರುತ್ತದೆ.

11. ಚಾ.ಸಾ–1 ರವರು ದೂರುದಾರರಾಗಿದ್ದು, ಇವರು ನಿ.ಪಿ–1 ರಿಂದ 7 ರ ದಾಖಲೆಗಳಿಗೆ ಪೂರಕವಾಗಿ ತನ್ನ ಸಾಕ್ಷ್ಯವನ್ನು ನುಡಿಯುತ್ತಾ, ತನ್ನ ಮತ್ತು ಆರೋಪಿಗಳ ನಡುವೆ ಕೊತ್ವಾಲಕಟ್ಟಿ ಗ್ರಾಮದ ಸರ್ವೆ ನಂಬರ್ 5/4 ರಲ್ಲಿ ಇರುವ ತನ್ನ 13.12 ಗುಂಟೆ ಜಮೀನಿನ ಒತ್ತುವರಿ ಕುರಿತು ಮನಸ್ತಾಪ ಇದ್ದು, ಸದರಿ ಜಮೀನನ್ನು ಪಕ್ಕದ ಜಮೀನಿನವರು ಒತ್ತುವರಿ ಮಾಡಿದ್ದಾರೆಂದು ತಾನು ಸಿವಿಲ್ ದಾವೆಯನ್ನು ದಾಖಲು ಮಾಡಿದ್ದೆ. ಈ ಹಿನ್ನೆಲೆಯಲ್ಲಿ ದಿನಾಂಕ 31.12.23 ರಂದು ರಾತ್ರಿ 9.30 ಗಂಟೆಯ ಸುಮಾರಿಗೆ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿಗಳು ಅಲ್ಲಿಗೆ ಬಂದು 3 ಲಕ್ಷ ಹಣವನ್ನು ಕೊಟ್ಟರೆ, ಸದರಿ ಸರ್ವೆ ನಂಬರ್ 5/4 ರ 13.12 ಗುಂಟೆ ಜಮೀನಿನಲ್ಲಿ ಸಾಗುವಳಿ ಮಾಡಲು ಬಿಡುತ್ತೇವೆ ಎಂದು ಹಾಗೂ ಹಣ ಕೊಡದೇ ಹೋದಲ್ಲಿ ನಮ್ಮ ಬಳಿ ಹಣ ಮತ್ತು ಜನರ ಬಲವಿದೆ, ಹಣ ಕೊಟ್ಟು ಜನರನ್ನು ಕರೆಯಿಸಿ ನಿನ್ನನ್ನು ಕೊಲೆ ಮಾಡಿಸುತ್ತೇವೆ ಎಂದು 1 ನೇ ಆರೋಪಿತನು ಹೇಳಿದ್ದು, ನಂತರ ಇಬ್ಬರು ಆರೋಪಿತರು ತಮ್ಮ ಕೆಲಸಕ್ಕೆ ತಡೆಯನ್ನು ಉಂಟು ಮಾಡಿ, ಅವಾಚ್ಯವಾಗಿ ಬೈದು ತನಗೆ ಹಲ್ಲೆ ಮಾಡಿದ್ದು, ಜೀವ ಬೆದರಿಕೆ ಹಾಕಿದ್ದಾಗಿ ಹೇಳಿಕೆ ನೀಡಿ, ನಂತರ ತಾನು ದೂರು ಕೊಟ್ಟ ಮೇರೆಗೆ ಪೊಲೀಸರು ಘಟನಾ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿದ ಕುರಿತು ಸಾಕ್ಷಿ ನುಡಿದಿರುತ್ತಾರೆ.

12. ಇವರ ಪಾಟೀ ಸವಾಲಿನಲ್ಲಿ ಆರೋಪಿತರು ಚಾ.ಸಾ–1 ರವರ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸಿ, ತಾನು ಕಟ್ಟಿದ ಕಾಂಪೌಂಡ್ ನ ಪಕ್ಕದಲ್ಲಿ ಬಿಟ್ಟಿರುವ ಜಾಗದಲ್ಲಿ ಆರೋಪಿತರು ತಮ್ಮ ಮನೆಗೆ ಓಡಾಡುತ್ತಿದ್ದಾರೆ. ಅದೇ ರೀತಿಯಾಗಿ, ತನ್ನ ಹಾಗೂ ಆರೋಪಿತರ ನಡುವೆ ಜಮೀನಿನ ಕುರಿತು ಮನಸ್ತಾಪ ಇದ್ದು ವ್ಯಾಜ್ಯ ನಡೆಯುತ್ತಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಚಾ.ಸಾ–4 ಮತ್ತು 5 ರವರ ಮನೆ ಅಥವಾ ಅಂಗಡಿ ಇರುವುದಿಲ್ಲ. ಚಾ.ಸಾ–4 ರವರು ತನ್ನ ಅಳಿಯನಾಗಿದ್ದು, ಅವರ ಮನೆ ಬೆಳಲಮಕ್ಕಿಯಲ್ಲಿ ಇದೆ ಎಂದು ಒಪ್ಪಿಕೊಂಡಿದ್ದಾರೆ.

13. ಅದೇ ರೀತಿಯಾಗಿ, ಆರೋಪಿತರ ಜಮೀನನ್ನು ತಾನು ಅಕ್ರಮವಾಗಿ ಕಬಳಿಸಲು ಪ್ರಯತ್ನಿಸಿದಾಗ ಅವರು ಪ್ರತಿಭಟನೆ ಮಾಡಿದ್ದರೆಂದು ತಾನು ರಾಜಕೀಯ ಪ್ರಭಾವ ಬಳಸಿ, ಸುಮಾರು 50–60 ಜನರ ವಿರುದ್ಧ ಕೇಸನ್ನು ದಾಖಲಿಸಿದ್ದಾನೆ ಎಂಬ ಸಲಹೆಗೆ ಆರೋಪಿತರು ಪ್ರತಿಬಂಧಕಾಜ್ಞೆ ಆದೇಶವನ್ನು ಉಲ್ಲಂಘನೆ ಮಾಡಿದ್ದರಿಂದ, ತಾನು ಪ್ರಕರಣವನ್ನು ದಾಖಲಿಸಬೇಕಾಯಿತು ಎಂದು ಒಪ್ಪಿಕೊಂಡಿದ್ದಾರೆ. ಆರೋಪಿತರ ವಿರುದ್ಧ ತಾನು ಯಾವುದೇ ಪ್ರತಿಬಂಧಕಾಜ್ಞೆ ಆದೇಶ ಪಡೆದಿರಲಿಲ್ಲ ಎಂಬುದನ್ನು ಸದರಿ ಚಾ.ಸಾ–1 ರವರು ಒಪ್ಪಿಕೊಂಡಿದ್ದಾರೆ.

14. ಪ್ರಾ.ಸಾ−2 ರವರು ಈ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದಾರೆ. ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 31.12.2023 ರಂದು ರಾತ್ರಿ 9.30 ರ ಸುಮಾರಿಗೆ ಬಿ.ಹೆಚ್. ರಸ್ತೆಯಲ್ಲಿ ತಾನು ಬೆಳಲಮಕ್ಕಿಯ ಕಡೆಗೆ ಬೆಳಲಮಕ್ಕಿಯಲ್ಲಿರುವ ತಮ್ಮ ಮನೆಯ ಕಡೆಗೆ ಹೋಗುತ್ತಿದ್ದಾಗ, ತನ್ನೊಂದಿಗೆ ಚಾ.ಸಾ−5 ರವರು ಇದ್ದರು. ಆ ಸಂದರ್ಭದಲ್ಲಿ ಚಾ.ಸಾ−1 ರವರ ಜಾಗದ ಕಾಂಪೌಂಡ್ ನ ಗೇಟ್ ತೆರೆದಿದ್ದು, ಅಲ್ಲಿಂದ ಗಲಾಟೆ ಶಬ್ದ ಕೇಳಿದ ಕಾರಣ ತಾನು ಅಲ್ಲಿಗೆ ಹೋದಾಗ, ಆರೋಪಿತರು ಚಾ.ಸಾ−1 ರವರಿಗೆ ಬೈದು ಬೆದರಿಕೆ ಹಾಕಿ ಹೊಡೆಯುತ್ತಿದ್ದರು. ನಂತರ ತಾವು ಜಗಳವನ್ನು ಬಿಡಿಸಿದ್ದು, 05.01.2024 ರಂದು ಪೊಲೀಸರು ಘಟನಾ ಸ್ಥಳದಲ್ಲಿ ತಮ್ಮನ್ನು ಕರೆಯಿಸಿ, ತಾವು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿ, ನಕ್ಷೆ ತಯಾರಿಸಿ ಫೋಟೋ ತೆಗೆದರು ಎಂಬುದಾಗಿ, ನಿ.ಪಿ−2 ಮತ್ತು 6 ಹಾಗೂ 7 ರ ದಾಖಲೆಗಳಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ.

15. ಇವರ ಪಾಟೀ ಸವಾಲಿನಲ್ಲಿ ದಿನಾಂಕ 31.12.2023 ರಂದು ಘಟನಾ ಸ್ಥಳಕ್ಕೆ ಬರುವಂತೆ ಚಾ.ಸಾ−1 ರವರು ನಮಗೆ ಹೇಳಿರುವುದಿಲ್ಲ, ತಮ್ಮನ್ನು ಹೊರತುಪಡಿಸಿ ಗಲಾಟೆ ಬಿಡಿಸಲು ಬೇರೆ ಯಾರೂ ಹೋಗಿರಲಿಲ್ಲ. ಆ ಕಾರಣದಿಂದ, ಆ ಸಂದರ್ಭದಲ್ಲಿ ಅಲ್ಲಿ ಯಾರೂ ಸಹ ಇರಲಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಮುಂದುವರೆದು, ಘಟನಾ ಸ್ಥಳದ ಚಕ್ಕುಬಂದಿ ತನಗೆ ಗೊತ್ತಿಲ್ಲ

ಎಂಬುದಾಗಿ ಹೇಳಿದ್ದಾರೆ. ಅದೇ ರೀತಿಯಾಗಿ, ಸ್ಥಳ ಪಂಚನಾಮೆಯನ್ನು ಪೊಲೀಸರು ಕೈಬರಹದಲ್ಲಿ ಬರೆದಿದ್ದು, ತಾನು ಮಹಜರನ್ನು ಹೇಳಿ ಬರೆಯಿಸಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಆದರೆ, ನಿ.ಪಿ-6 ರ ಪಂಚನಾಮೆಯನ್ನು ಗಮನಿಸಲಾಗಿ, ಸದರಿ ಪಂಚನಾಮೆಯನ್ನು ಗಣಕಯಂತ್ರದಿಂದ ಬೆರಳಚ್ಚು ಮಾಡಿರುವುದು ಕಂಡುಬರುತ್ತದೆ. ಸದರಿ ಪ್ರಾ.ಸಾ-2 ರವರು ಈ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಹೇಳಿಕೆಯಲ್ಲಿ ಸ್ವತಃ ಹೇಳಿದಂತೆ, ಗಲಾಟೆ ಶಬ್ದವನ್ನು ಕೇಳಿ ತಾನು ಘಟನಾ ಸ್ಥಳಕ್ಕೆ ಚಾ.ಸಾ-5 ರವರೊಂದಿಗೆ ಹೋಗಿರುವುದಾಗಿ ಒಪ್ಪಿರುತ್ತಾರೆ. ನಿ.ಪಿ-2 ರ ಪಂಚನಾಮೆಗೆ ವ್ಯತಿರಿಕ್ತವಾಗಿ, ಪ್ರಾಸಾ-2 ರವರು ಸಾಕ್ಷಿ ನುಡಿದಿರುವುದು ಸದರಿಯವರ ಹೇಳಿಕೆ ಹಾಗೂ ನಿ.ಪಿ-6 ರ ಪಂಚನಾಮೆಯಿಂದ ಕಂಡುಬರುತ್ತದೆ.

16. ಪ್ರಾಸಾ-3 ರವರು ಈ ಪ್ರಕರಣದ ತನಿಖಾಧಿಕಾರಿಗಳಾಗಿದ್ದು, ಇವರು ಭಾಗಶಃ ತನಿಖೆಯನ್ನು ಮಾಡಿದ ಕುರಿತು ಸಾಕ್ಷಿ ನುಡಿದಿದ್ದಾರೆ. ಇವರ ಪಾಟೀ ಸವಾಲಿನಲ್ಲಿ ಘಟನೆಯ ಕಾಲಕ್ಕೆ ಚಾ.ಸಾ-1 ರವರೊಂದಿಗೆ ಚಾ.ಸಾ-4 ರವರು ಇದ್ದರು ಎಂದು ತಮ್ಮ ತನಿಖೆಯಲ್ಲಿ ಕಂಡುಬಂದಿರುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ಚಾ.ಸಾ-4 ರವರ ಹೇಳಿಕೆಯಂತೆ, ಘಟನಾ ಸ್ಥಳದಲ್ಲಿ ಗಲಾಟೆ ಶಬ್ದ ಕೇಳಿದಾಗ, ತಾನು ಚಾ.ಸಾ-5 ರವರೊಂದಿಗೆ ಸ್ಥಳಕ್ಕೆ

ಹೋಗಿರುತ್ತಾರೆ. ನಿ.ಪಿ–3 ಮತ್ತು ಸಾಕ್ಷಿದಾರರ ಹೇಳಿಕೆಯ ಆಧಾರದ ಮೇಲೆ ತಾನು ಆರೋಪಿತರು ಚಾ.ಸಾ–1 ರವರ ಸ್ವತ್ತಿನಲ್ಲಿ ಅತಿಕ್ರಮಣ ಮಾಡಿದ್ದಾಗಿ, ಸಾಕ್ಷಿ ನುಡಿಯುತ್ತಿರುವುದಾಗಿ ಹೇಳಿದ್ದಾರೆ.

17. ಫ್ರಾಸಾ–4 ರವರು ನಿ.ಪಿ–6 ಮತ್ತು 8 ರ ಪಂಚನಾಮೆ ಹಾಗೂ ನಕ್ಷೆ ತಯಾರಿಸಿದ ಸಂದರ್ಭದಲ್ಲಿ ಹಾಜರಿದ್ದ ಮತ್ತೊಬ್ಬ ಸಾಕ್ಷಿದಾರರಾಗಿದ್ದು, ಇವರು ಪಂಚನಾಮೆಗೆ ಪೂರಕವಾಗಿ, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರು ತಮ್ಮ ಪಾಟೀ ಸವಾಲಿನಲ್ಲಿ ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದ ದಿನಾಂಕ ನನಗೆ ನೆನಪಿಲ್ಲ. ದಿನಾಂಕ 05.01.2024 ರ ಮೂರು ದಿನಗಳ ಹಿಂದೆ ಈ ಘಟನೆ ನಡೆಯಿತು ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿಯಾಗಿ, ಮಹಜರ್ ನಲ್ಲಿರುವ ವಿಷಯಗಳನ್ನು ಪೊಲೀಸರೇ ಹೇಳಿದರು ಹಾಗೂ ತಾನು ಕೈಬರಹದ ಪಂಚನಾಮೆಗೆ ಎಲ್ಲಿಯೂ ಸಹಿ ಮಾಡಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಮುಂದುವರೆದು ಮಹಜರನ್ನು ಪೊಲೀಸರು ಕೈಬರಹದಲ್ಲಿಯೇ ಬರೆದಿದ್ದಾರೆ ಎಂದು ಸ್ವತಃ ಹೇಳಿಕೆಯನ್ನು ನೀಡಿರುತ್ತಾರೆ. ಇದರಿಂದ ಸದರಿ ರವರ ಹೇಳಿಕೆಯು ನಿ.ಪಿ–6 ರ ಪಂಚನಾಮೆಗೆ ವ್ಯತಿರಿಕ್ತವಾಗಿದೆ ಎಂಬುದು ಕಂಡುಬರುತ್ತದೆ.

18. ಫ್ರಾಸಾ–5 ರವರು ಈ ಪ್ರಕರಣದ ದಾಖಲಾಧಿಕಾರಿಗಳು ಮತ್ತು ಭಾಗಶಃ ತನಿಖಾಧಿಕಾರಿಯಾಗಿದ್ದಾರೆ. ಇವರು ಚಾ.ಸಾ–1 ರವರಿಂದ ದೂರನ್ನು ಪಡೆದುಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಸ್ಥಳ ಪಂಚನಾಮೆಯನ್ನು ಮಾಡಿದ ಕುರಿತು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಪಾಟೀ ಸವಾಲಿನಲ್ಲಿ ದೂರನ್ನು ಸ್ವೀಕರಿಸುವ ಮೊದಲು ಕೊತ್ವಾಲಕಟ್ಟಿ ಗ್ರಾಮದ ಸರ್ವೆ ನಂಬರ್ 5/4 ರಲ್ಲಿ ಚಾ.ಸಾ–1 ರವರಿಗೆ ಏನು ಹಕ್ಕು ಇದೆ ಎಂದು ತಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ, ನಕ್ಷೆಯಲ್ಲಿ ಕಂಡ ಜಾಗ ಯಾರಿಗೆ ಸೇರಿದ್ದು ಎಂದು ತನಗೆ ಗೊತ್ತಿಲ್ಲ, ಚಾ.ಸಾ–2 ಮತ್ತು 3 ರವರು ಘಟನಾ ಸ್ಥಳದ ನೆರೆಹೊರೆಯವರಲ್ಲ ಎಂದರೆ ಸರಿ, ಚಾ.ಸಾ–1 ರವರೊಂದಿಗೆ 2 ಮತ್ತು 3 ರವರು ಏನು ಸಂಬಂಧ ಹೊಂದಿದ್ದಾರೆ ಎಂದು ನಾನು ವಿಚಾರಣೆ ಮಾಡಿಲ್ಲ, ನಿ.ಪಿ–7 ರ ನಕ್ಷೆಯಲ್ಲಿ ಕಾಣಿಸಿದ ಸ್ವತ್ತಿನ ಕ್ಷೇತ್ರವನ್ನು ನಾನು ಅಳತೆ ಮಾಡಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ.

19. ಇವರ ಹೇಳಿಕೆಯಿಂದ ಕಂಡುಬರುವುದೇನೆಂದರೆ, ತನಿಖಾಧಿಕಾರಿಗಳು ಈ ಪ್ರಕರಣವನ್ನು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 447 ರ ಅಪರಾಧಕ್ಕೂ ಸಹ ಸಲ್ಲಿಸಿರುವುದರಿಂದ, ಸದರಿ ಚಾ.ಸಾ–1 ರವರು ತನ್ನದು ಎಂದು ಹೇಳುವ ಸ್ವತ್ತಿನ ಕ್ಷೇತ್ರವನ್ನು ಸೂಕ್ತ ರೀತಿಯಲ್ಲಿ ಅಳತೆಯನ್ನು ಮಾಡದ ಹೊರತು, ಸದರಿ ಆರೋಪಿತರು ಫ್ರಾ.ಸಾ–1 ರವರ ಸ್ವತ್ತಿಗೆ ಅತಿಕ್ರಮ

ಪ್ರವೇಶ ಮಾಡಿದ್ದಾರೆ ಎನ್ನುವ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅದೇ ರೀತಿಯಾಗಿ, ಚಾ.ಸಾ–2 ಮತ್ತು 3 ರವರು ಘಟನಾ ಸ್ಥಳದ ಅಕ್ಕಪಕ್ಕದವರಲ್ಲ ಎಂದು ಒಪ್ಪಿಕೊಂಡಿರುವುದರಿಂದ, ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಸಾಕಷ್ಟು ಅಂಗಡಿಗಳು ಮತ್ತು ಮನೆಗಳಿರುವುದರಿಂದ, ಸ್ಥಳೀಯರನ್ನು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಸಾಕ್ಷಿ ಮಾಡಿರುವುದಿಲ್ಲ. ಆದಕಾರಣ, ಸದರಿ ಪ್ರಕರಣದ ಕುರಿತು ಸಂಶಯ ಉಂಟಾಗುತ್ತದೆ.

20. ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ವಿಚಾರಣೆಗೆ ಒಳಪಟ್ಟ ಫ್ರಾ.ಸಾ–1 ರಿಂದ 5 ರವರ ಹೇಳಿಕೆಗಳು ಹಾಗೂ ಅಭಿಯೋಜನೆ ಪರವಾಗಿ ಗುರುತಿಸಿರುವ ನಿ.ಪಿ–1 ರಿಂದ 11 ರ ದಾಖಲೆಗಳನ್ನು ಗಮನಿಸಿದಾಗ, ಚಾ.ಸಾ–1 ಮತ್ತು ಆರೋಪಿತರ ನಡುವೆ ಸಿವಿಲ್ ವ್ಯಾಜ್ಯಗಳು ಮತ್ತು ಕ್ರಿಮಿನಲ್ ಪ್ರಕರಣಗಳು ವಿಚಾರಣೆ ನಡೆಯುತ್ತಿದ್ದು, ಈ ಕುರಿತಂತೆ ಉಭಯೇತರರ ನಡುವೆ ಮನಸ್ತಾಪ ಇರುತ್ತದೆ. ಅದೇ ರೀತಿಯಾಗಿ, ಆರೋಪಿತರು ಚಾ.ಸಾ–1 ರವರಿಗೆ ಹಲ್ಲೆ ಮಾಡಿದ್ದಾರೆ ಎಂಬುದಾಗಿ, ತಮ್ಮ ಸಾಕ್ಷ್ಯವನ್ನು ಚಾ.ಸಾ–1 ಮತ್ತು ಇತರೆ ಸಾಕ್ಷಿದಾರರು ನುಡಿದಿದ್ದು, ಸದರಿ ಹಲ್ಲೆಯ ಕುರಿತು ಯಾವುದೇ ಗಾಯದ ಪ್ರಮಾಣ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಹಾಗೂ ಚಾ.ಸಾ–1 ರವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಯನ್ನು ಸಹ ಪಡೆದಿರುವುದಿಲ್ಲ.

21. ಫ್ರಾ.ಸಾ–2 ರವರು ಫ್ರಾ.ಸಾ–1 ರವರ ಸಂಬಂಧಿಯಾಗಿರುತ್ತಾರೆ. ದೋಷಾರೋಪಣ ಪಟ್ಟಿಯಂತೆ, ಫ್ರಾ.ಸಾ–2 ರವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದರೂ ಸಹ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಒಪ್ಪಿಕೊಂಡಂತೆ ಸದರಿಯವರು ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಹೋಗಿರುವುದಾಗಿ ಕಂಡುಬರುತ್ತದೆ. ಅದೇ ರೀತಿಯಾಗಿ, ಫ್ರಾ.ಸಾ–2 ಮತ್ತು 4 ರವರು ನಿ.ಪಿ–6 ಮತ್ತು 7 ರ ಪಂಚನಾಮೆಗಳಿಗೆ ವ್ಯತಿರಿಕ್ತವಾಗಿ ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ತನಿಖಾಧಿಕಾರಿಗಳು ಘಟನಾ ಸ್ಥಳದ ಸ್ಥಳೀಯರನ್ನು ಪಂಚನಾಮೆಗೆ ಕರೆದು ವಿಚಾರಣೆ ಮಾಡಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ, ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಿದ ಆರೋಪಗಳ ಬಗ್ಗೆ ಸಂಶಯಾತೀತವಾಗಿ ಸಾಬೀತುಪಡಿಸಲು ವಿಫಲವಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟು, ಮೇಲಿನ ಅಂಶ 1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

22. **ಅಂಶ 5:** ಮೇಲ್ಕಂಡ ಚರ್ಚೆಯಲ್ಲಿ ಅಂಶ–1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ಆರೋಪಿತರು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶ ಹೊರಡಿಸಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ. 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 447, 504, 323, 506 ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ ಸದರಿ ಆರೋಪಿತರನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಗೊಳಿಸಿದೆ.

ಆರೋಪಿತರು ಮತ್ತು ಅವರ ಜಾಮೀನುದಾರನು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ. 437(ಎ) ನಂತೆ ಮುಂದಿನ 6 ತಿಂಗಳವರೆಗೆ ಜಾರಿಯಲ್ಲಿರುತ್ತವೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿ ಮಾಡಿ, ಈ ದಿನ ಅಂದರೆ, ದಿನಾಂಕಃ 11ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

**(ಮಾದೇಶ ಎಂ.ವಿ.,)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಾಗರ**

## ಅನುಬಂಧ

### 1. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

| | |
|---|---|
| ಪ್ರಾ.ಸಾ–1 | ವಿಜಯಕುಮಾರ್ ಪಾಟೀಲ್. |
| ಪ್ರಾ.ಸಾ–2 | ಪ್ರದೀಪ. |
| ಪ್ರಾ.ಸಾ–3 | ನಾಗರಾಜ. |
| ಪ್ರಾ.ಸಾ–4 | ಕಿಶೋರ್ ಸಿಂಗ್. |
| ಪ್ರಾ.ಸಾ–5 | ಶ್ರೀಮತಿ ಡಿ ಹೆಚ್ ಮೀರಾ ಬಾಯಿ. |

### 2. ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:

| | |
|---|---|
| ನಿಪಿ–1 | ದೂರು. |
| ನಿಪಿ–2 | ಫೋಟೋ. |
| ನಿಪಿ–3–5 | ಆರ್.ಟಿ.ಸಿ, ಆಕಾರ್ ಬಂದ್ ಮತ್ತು ನಕ್ಷೆ. |
| ನಿಪಿ–6–7 | ಸ್ಥಳ ಪಂಚನಾಮೆ. |
| ನಿಪಿ–8 | ದಿನಾಂಕ 05.01.2024 ರ ನೋಟೀಸ್. |
| ನಿಪಿ–9 | ಪ್ರಥಮ ವರ್ತಮಾನ ವರದಿ. |
| ನಿಪಿ–10 | ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ |

| | |
|---|---|
| | 65(ಬಿ) ರಲ್ಲಿನ ದೃಢೀಕರಣ ಪತ್ರ. |
| ನಿಪಿ– 11 | ಸಿ.ಡಿ. |

**3. ಅಭಿಯೋಜನೆಯ ಪರ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿ:**

– ಏನೂ ಇಲ್ಲ –

**4. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

– ಏನೂ ಇಲ್ಲ –

**5. ಆರೋಪಿಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:**

| | |
|---|---|
| ನಿ.ಡಿ.1 | ಮಾನ್ಯ ಜಿಲ್ಲಾಧಿಕಾರಿಯವರ ಆದೇಶ ಪ್ರತಿ. |
| ನಿ.ಡಿ.2 | ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು. |
| ನಿ.ಡಿ.3 | ದೂರಿನ ದೃಢೀಕೃತ ನಕಲು. |
| ನಿ.ಡಿ.4 – 11 | ಫೋಟೋಗಳು. |

**(ಮಾದೇಶ ಎಂ.ವಿ.,)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಾಗರ.**